‘ಇರು ಚಿಕ್ಕಮ್ಮ, ಮೊದ್ಲು ಟೀ ಕುಡಿದು ಬಿಡ್ತೀನಿ.’

ಋತುವೆಂದಾಗ ಅವಳ್ಯಾವ ಸಿಹಿಸುದ್ದಿ ಹೇಳಬಹುದೆಂದು ಕುತೂಹಲ ಮುಖದಲ್ಲಿ ಇಣುಕಿತು.

‘ಮೊದ್ಲು ನೀನು ಸಿಹಿ ತಿನ್ನು ಚಿಕ್ಕಮ್ಮ, ಯಾಕೇಂತ ಆಮೇಲೆ ಹೇಳ್ತೀನಿ....’ ಟೀ ಕುಡಿದ ಋತು ಬಲವಂತವಾಗಿ ತಮಗೆ ಸಿಹಿ ತಿನ್ನಿಸಿದಾಗ ಕಲಾವತಿಯ ಕುತೂಹಲ ಮತ್ತಷ್ಟು ಹೆಚ್ಚಾಗಿತ್ತು.

‘ನೀನಿನ್ನು ನನ್ನ ಸತಾಯಿಸಿದ್ರೆ ಸುಮ್ನಿರಲ್ಲ ನೋಡು, ಅದೇನು ಹೇಳ್ಬೇಕೂಂತಿದ್ದಿಯೋ ಬೇಗ ಹೇಳ್ಬಿಡು ಮಹರಾಯ್ತಿ..’

ಚಿಕ್ಕಮ್ಮನ ಆತುರವನ್ನು ನೋಡಿ ಋತುವಿಗೆ ನಗೆಯುಕ್ಕಿತು.

‘ಅದು....ಚಿಕ್ಕಮ್ಮ....ಇಷ್ಟು ದಿನ ನಾನು ಮದ್ವೇನ ಮುಂದು ಹಾಕುತ್ತಾ ಬಂದಿದ್ದಕ್ಕೆ ನನ್ಮೇಲೆ ನಿಂಗೆ ಬೇಜಾರಿದ್ಯಲ್ಲಾ, ಇನ್ಮೇಲೆ ಅದೆಲ್ಲಾ ಇಲ್ಲ, ನಾನು ಮದ್ವೆ ಆಗ್ಬೇಕೂಂತ ಡಿಸೈಡ್ ಮಾಡಿದ್ದೀನಿ, ಅಷ್ಟೇ ಅಲ್ಲ ಚಿಕ್ಕಮ್ಮ....ನನ್ನನ್ನು ಮದುವೆಯಾಗುವ ಹುಡುಗನನ್ನು ನಾನೇ ಆರಿಸಿಕೊಂಡಿದ್ದೀನಿ...’

ಋತುವಿನ ಮಾತಿನಿಂದ ಕಲಾವತಿ ಚಕಿತಗೊಂಡು ಅವಳತ್ತಲೇ ನೋಡಿದರು. ಮೊದಲಿನಿಂದಲೂ ಮದುವೆಯ ಬಗ್ಗೆ ನಿರಾಸಕ್ತಿ ತಾಳಿದ್ದ ಋತುವೇ ಹೀಗೆ ಮಾತನಾಡುತ್ತಿರುವುದು....! ಆಕೆಗೆ ನಂಬಲಾಗಲಿಲ್ಲ.

‘ನಂಗೊತ್ತು ಚಿಕ್ಕಮ್ಮ, ನಿಂಗಿದು ಶಾಕಿಂಗ್ ನ್ಯೂಸೇ, ಎಲ್ಲ ವಿಷಯವನ್ನೂ ನಿಧಾನವಾಗಿ ಹೇಳ್ತೀನಿ, ನನ್ನ ಪಕ್ಕದಲ್ಲಿ ಕೂತ್ಕೋ...’ ಎಂದವಳು ಕಲಾವತಿಯ ಕೈ ಹಿಡಿದೆಳೆದು ಸೋಫಾದಲ್ಲಿ ತನ್ನ ಪಕ್ಕದಲ್ಲಿ ಕೂರಿಸಿಕೊಂಡಳು.

ಶ್ರೀನಿವಾಸ ಕಲ್ಯಾಣ ನಾಟಕದ ನೃತ್ಯರೂಪಕದಿಂದ ಮೊದಲ್ಗೊಂಡು ಈ ದಿನ ಹೇಮಂತ ತಮ್ಮನ್ನು ಅಪಹರಿಸಿದ ವಿಷಯದವರೆಗೂ ವಿವರವಾಗಿ ಹೇಳಿ ಮುಗಿಸಿದಾಗ ಕಲಾವತಿಗೂ ಅಚ್ಚರಿ! .ಹೀಗೂ ನಡೆಯುತ್ತದೆಯೆ? ಹುಡುಗು ಮನಸ್ಸಿನ ಪ್ರೀತಿ ಹೀಗೆ ಹೆಮ್ಮರವಾಗಿ ಪರಸ್ಪರರನ್ನು ಒಂದುಗೂಡಿಸುತ್ತದೆಯೇ? ಕಾಣದ ಆ ವಿಧಿಯ ಚಮತ್ಕಾರಕ್ಕೆ ಅವರು ತಲೆ ಬಾಗಲೇಬೇಕಾಯಿತು.

‘ಅಯ್ಯೋ ನನ್ನ ಕಂದಾ, ಇಷ್ಟು ದಿನ ಇಷ್ಟೆಲ್ಲಾ ಸಂಕಟವನ್ನು ಹೊಟ್ಟೆಯಲ್ಲಿಟ್ಟುಕೊಂಡಿದ್ದಾ ಋತು, ಅಂತೂ ಎಲ್ಲಾ ಸುಖಾಂತ್ಯವಾಯ್ತಲ್ಲ.... ನಿನ್ನ, ಹೇಮಂತನ ಮದ್ವೆಯನ್ನು ಅದ್ದೂರಿಯಾಗಿ ಮಾಡಿಯೇ ಬಿಡೋಣ, ನಿಮ್ಮಪ್ಪ ಬಂದ ತಕ್ಷಣ ಮಾತಾಡೋಣ ಬಿಡು....’

ಕಲಾವತಿ ಸಮ್ಮತಿಯ ಮುದ್ರೆಯೊತ್ತಿದಾಗ ಋತುವಿಗೂ ನಿರಾಳವಾಯಿತು.

ಆ ರಾತ್ರಿ ಬಂಗಲೆಗೆ ಹಿಂದಿರುಗಿದ ಪುರುಷೋತ್ತಮರಿಗೂ ಸಿಹಿ ಸುದ್ದಿ ಕಾದಿತ್ತು. ಮಗಳು ಪ್ರೈವೇಟ್ ಡಿಟೆಕ್ಟಿವ್ ಹೇಮಂತ ಕುಮಾರನನ್ನು ಪ್ರೇಮಿಸಿರುವ ವಿಷಯ ತಿಳಿದಾಗ ಅವರ ಮುಖ ಸಂತೋಷದಿಂದ ಅರಳಿತು.

‘ಅವನ ಹೆಸರನ್ನು ಬಹಳವಾಗಿ ಕೇಳಿದ್ದೇನೆ ಋತು, ಬಹಳಷ್ಟು ಪೊಲೀಸ್ ತನಿಖೆಗಳಲ್ಲಿ ಅವನ ಹಸ್ತಕ್ಷೇಪವಂತೂ ಇದ್ದೇ ಇರುತ್ತೆ, ಅಂಥವನು ಈ ಕೋಟೆ ಬಂಗಲೆಯ ಅಳಿಯನಾಗುವುದೆಂದರೆ....ನಂಗೆ ತುಂಬಾ ಸಂತೋಷವಾಗ್ತಿದೆಯಮ್ಮಾ....ಅಂತೂ ನೀನು ಮದುವೆಯಾಗಲು ಒಪ್ಪಿದೆಯಲ್ಲಾ, ನನಗಷ್ಟೇ ಸಾಕು....’ ಎಂದವರು ಮಗಳನ್ನಪ್ಪಿಕೊಂಡರು.

‘ನಾನೂ ಹೇಮಂತನನ್ನು ನೋಡಿಲ್ಲ ಋತು, ಚಿಕ್ಕ ವಯಸ್ಸಿನ ಶ್ರೀನಿವಾಸನ ಪಾತ್ರದಾರಿ ಹೇಮಂತನನ್ನು ನೋಡಿದ್ದಷ್ಟೇ....ವೀಕ್‌ಎಂಡಿನಲ್ಲೇ ಅಂದ್ರೆ ಈ ಶನಿವಾರವೇ ಅವನನ್ನು ಕರೆದು ಬಿಡೋಣ, ಅವನನ್ನು ಪರಿಚಯ ಮಾಡಿಕೊಂಡ ಹಾಗೂ ಆಗುತ್ತೆ....’

### ಎರಡುಹಾಯ್ಕುಗಳು

ಶ್ರೀಮಂತರಿಗೇನೂ
ಕೊರತೆ ಇಲ್ಲ;
ನೆಮ್ಮದಿ ಒಂದಿಲ್ಲ!
***
ಸುಂದರ ಅರಮನೆಗೆ
ಅವಳ ಕಲ್ಪನೆಗಳೆ
ಇಟ್ಟಿಗೆ!

★ **ಗೋಪಿ ಹಿರೇಬೆಟ್ಟು**



ರಾತ್ರಿಯೂಟ ಮುಗಿದ ಮೇಲೆ ಪುರುಷೋತ್ತಮರು ಹೇಳಿದಾಗ ಋತು ಹಿಗ್ಗಿನಿಂದ ತಲೆಯಾಡಿಸಿದಳು.

ಆದರೆ ಅವಳೊಂದು ವಿಷಯವನ್ನು ಗಮನಿಸಿರಲಿಲ್ಲ. ಬೆಳಗ್ಗಿನಿಂದ ಅವಳನ್ನು ಹೇಮಂತನ ಕಡೆಯವನೂ ಅಲ್ಲದ ಮೂರನೆಯ ವ್ಯಕ್ತಿಯೊಂದು ಎಡಬಿಡದೆ ಹಿಂಬಾಲಿಸಿಕೊಂಡಿತ್ತು....!

9

ಶೃಂಗಾರಕಾವ್ಯದ ರಸಾನುಭೂತಿ!

ಆ ರಾತ್ರಿ ಕಲಾವತಿ ತಂದುಕೊಟ್ಟ ಹಾಲನ್ನು ಕುಡಿದು ಋತು ಮಲಗಿಕೊಳ್ಳಲು ಹೊರಟಾಗಲೇ ಅವಳ ಮೊಬೈಲಿಗೊಂದು ಕರೆ ಬಂತು. ಇಷ್ಟು ಹೊತ್ತಿಗೆ ಯಾರು ಮಾಡಿರಬಹುದೆಂದು ಯೋಚಿಸುತ್ತಲೇ ಆ ಕರೆಯನ್ನು ಸ್ವೀಕರಿಸಿದಳು. ಅವನಿಗೆ ತನ್ನ ಮೊಬೈಲ್ ನಂಬರನ್ನೇನೂ ಕೊಟ್ಟಿರಲಿಲ್ಲ, ಆದರೂ ತನಗೆ ಕರೆ ಮಾಡಿದ್ದಾನೆ. ಎರಡು ವರ್ಷದಿಂದ ತನ್ನನ್ನು ಬೆಂಬಿಡದೆ ಹಿಂಬಾಲಿಸಿದ ಭೂಪನಿಗೆ ತನ್ನ ಮೊಬೈಲ್ ನಂಬರನ್ನು ಕಂಡು ಹಿಡಿಯುವುದು ಕಷ್ಟದ ಕೆಲಸವೇ?

‘ಯಾಕೆ ಮರಿ ಏನೂ ಮಾತಾಡ್ತಿಲ್ಲ, ನನ್ಮೇಲೆ ಅಷ್ಟು ಬೇಗ ಬೇಜಾರಾಗಿ ಹೋಯ್ತ’ ಅವನು ಬೇಕೆಂದೇ ಛೇಡಿಸಿದ.

‘ಬೇಜಾರಾ....ನಿಜ ಹೇಳಬೇಕಂದ್ರೆ ನಂಗೆ ನಿಮ್ಮ ಮನೆಯನ್ನು ಬಿಟ್ಟು ಬರೋಕೇ ಮನಸ್ಸಿರ್ಲಿಲ್ಲ ಗೊತ್ತಾ?....ಯಾವಾಗ್ಲೂ ನಿನ್ನ ಜೊತೆ ಇರಬೇಕೆನ್ನುವ ಆಸೆ’

‘ಹೌದಾ....ನಾವು ಮಹಡಿಯ ಮೇಲೆ ಇದ್ವಲ್ಲಾ, ಹಾಗಿರಬೇಕೆನ್ನುವ ಆಸೇನಾ....’ ಅವನು ಕೆಣಕಿದಾಗ ಅವಳು ಕೆಂಪಾದಳು.

‘ಅದಿರ್ಲಿ ಋತು, ನಮ್ಮ ವಿಷಯವನ್ನು ನಿಮ್ಮ ತಂದೆಯ ಜೊತೆ ಮಾತನಾಡಿದ್ಯಾ?’

‘ಮಾತಾಡ್ದೆ ಹೇಮಂತ್....ತುಂಬಾ ಖುಷಿಪಟ್ರು, ನಿನ್ನ ಹೆಸರನ್ನು ತುಂಬಾ ಕೇಳಿದ್ದೀನಿ ಅಂದ್ರು, ಅಷ್ಟೇ ಅಲ್ಲ, ಈ ವೀಕೆಂಡಿನಲ್ಲಿ ನಮ್ಮ ಬಂಗಲೆಗೆ ನೀನು ಡಿನ್ನರಿಗೆ ಬರ್ಬೇಕಂತೆ, ಆಗ ಪರಿಚಯವಾದ ಹಾಗೂ ಆಗುತ್ತೆ ಅಂದ್ರು, ಬರ್ತಿಯಾ ಹೇಮಂತ್, ಪ್ಲೀಸ್ ನನಗಾಗಿ....’

ಅವಳೆಂದಾಗ ಅವನು ಶನಿವಾರ ರಾತ್ರಿ ಬಂಗಲೆಗೆ ಬರಲು ಒಪ್ಪಿದ.

ಮತ್ತೊಂದು ಗಂಟೆ ಸರಸ ಸಂಭಾಷಣೆಯಲ್ಲಿ ಸಮಯ ಹೋದುದೇ ತಿಳಿಯಲಿಲ್ಲ.

‘ಸರಿ ಋತು, ತುಂಬಾ ಹೊತ್ತಾಯ್ತು, ಇನ್ನು ಮಲಗು, ಕನಸಿನಲ್ಲಿ ನನ್ನ ಜೊತೆ ರೊಮ್ಯಾನ್ಸ್ ಮಾಡೋದನ್ನು ಮಾತ್ರ ಮರೀಬೇಡ, ಗುಡ್‌ನೈಟ್..’

ಅವನು ಡಿಸ್ಕನೆಕ್ಟ್ ಮಾಡಿದಾಗ ಅವಳು ಬೆಚ್ಚಗಾದಳು. ತುಂಟ....ಮನಸ್ಸಿಗೆ ಅನಿಸಿದ್ದನ್ನು ಮಾತನಾಡಿಬಿಡುತ್ತಾನೆ. ಅವನ ತುಂಟತನ ತನ್ನ ಮನಸ್ಸಿಗೂ ಆಪ್ಯಾಯಮಾನವಾಗಿಯೇ ಇದೆ. ಆ ರಾತ್ರಿ ಬೆಚ್ಚಗೆ ಹೊದ್ದು ನೆಮ್ಮದಿಯಿಂದ ನಿದ್ರಿಸಿದಳು. ಹೇಮಂತ ಹೇಳಿದಂತೆ ಅವಳ ಕನಸಿನ ತುಂಬಾ ಅವನ ತುಂಟತನವಿತ್ತು. ಶೃಂಗಾರಕಾವ್ಯದ ರಸಾನುಭೂತಿಯಿತ್ತು.

ಮರುದಿನ ಮಧ್ಯಾಹ್ನದವರೆಗೂ ತರಗತಿಗಳಿದ್ದುದರಿಂದ ಋತು ಅವುಗಳಲ್ಲೇ ಮುಳುಗಿಹೋದಳು. ಈ ದಿನ ವಿದ್ಯಾರ್ಥಿಗಳ ಮುಖದಲ್ಲಿ ಅಷ್ಟೊಂದು ಭಯದ ಛಾಯೆಯಿರಲಿಲ್ಲ. ಹಾಜರಾತಿಯೂ ಸಾಕಷ್ಟಿತ್ತು. ಪರೀಕ್ಷೆಗಳು ಸನಿಹವಾಗುತ್ತಿದುದರಿಂದ ಋತುವೂ ಸಿಲಬಸ್ಸನ್ನು ಮುಗಿಸುವ ಅನಿವಾರ್ಯದಲ್ಲಿದ್ದಳು.

ಪ್ರಿನ್ಸಿಪಲ್ ಭುವನೇಶ್ವರಿ ಲಂಚ್ ಅವರ್‌ನಲ್ಲಿ ತಮ್ಮನ್ನು ಬಂದು ನೋಡಬೇಕೆಂದು ಮೆಸೇಜ್ ಮಾಡಿದ್ದರು.

ತರಗತಿಗಳನ್ನು ಮುಗಿಸಿ ಅವರನ್ನು ಭೇಟಿಯಾದಳು ಋತು.

ಈ ದಿನ ಅವರ ಆತಂಕೂ ಕಡಿಮೆಯಾದಂತಿತ್ತು. ಋತುವನ್ನು ನೋಡಿ ಕುಳಿತುಕೊಳ್ಳಲು ಸೂಚಿಸಿದರು.

‘ಋತು....ಏಕೆ ಕರೆಸಿಕೊಂಡೆನೋ ಎಂದು ಭಯವಾಯ್ತಾ, ನೀನು ಹೇಮಂತ ಒಂದಾಗಿದ್ದಕ್ಕೆ ಕಂಗ್ರಾಟ್ಸ್ ಹೇಳೋಣ ಅಂತ ಅಷ್ಟೇ..’ ನಗುತ್ತಾ ಮಾತನಾಡಿದರು.

ಹೇಮಂತ ತನ್ನನ್ನು ಕುಮಾರ್ ಎಂದು ಪರಿಚಯಿಸಿಕೊಂಡಾಗ ಭುವನೇಶ್ವರಿಯವರೂ ಅದನ್ನು ಬೆಂಬಲಿಸಿದ್ದರು. ಅವನ ನಾಟಕಕ್ಕೆ ಇವರು ತಾಳ ಹಾಕಿದ್ದು ಅವಳಿಗೆ ಆಶ್ಚರ್ಯವನ್ನು ತರಿಸಿತು.